| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 347/2012**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 2

ಸಾಕ್ಷಿದಾರರ ಹೆಸರು : ವೀರಭದ್ರಪ್ಪ
ತಂದೆಯ ಹೆಸರು : ಗುರಪ್ಪ
ಪ್ರಾಯ : 34 ವರ್ಷ
ಉದ್ಯೋಗ : ಒಕ್ಕುಲುತನ
ವಾಸ : ಗುಡ್ಡದ ದೇವಲಾಪೂರ

ದಿನಾಂಕ 26.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈಗ ನನಗೆ ತೋರಿಸಿದ ದಾಖಲೆ ಸ್ಥಳ ಪಂಚನಾಮೆಯಾಗಿದ್ದು, ಅದನ್ನು **ನಿಪಿ-1 ಎಂದು** ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನೋಡಿ ಗುರುತಿಸಿದ್ದು ಅದನ್ನು **ನಿಪಿ-1(ಎ) ಎಂದು** ಗುರುತಿಸಲಾಯಿತು. ಸದರಿ ದಾಖಲೆಗೆ ಸುಮಾರು 12 ವರ್ಷಗಳ ಹಿಂದೆ ಹನಮಸಾಗರ ಪೋಲಿಸ್ ಠಾಣೆಯಲ್ಲಿ ಪೋಲಿಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೆನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಚಾಸಾ-1 ರವರು ನನ್ನ ಸಮಕ್ಷಮ ಯಾವುದೆ ಹಲ್ಲೆ ಘಟನೆ ಜಾಗವನ್ನು ತೋರಿಸಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೆ ಮಹಜರನ್ನು ಜರುಗಿಸಿ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-**

2) ದಿನಾಂಕಃ07.06.2012 ರಂದು ಬೆಳಗ್ಗೆ ಸುಮಾರು 10.00 ಗಂಟೆ ಸಮಯದಲ್ಲಿ ಗುಡ್ಡದದೇವಲಾಪೂರ ಗ್ರಾಮದಲ್ಲಿ ಆರೋಪಿತರು ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ

ನಿಂದಿಸಿದ್ದು, ಮತ್ತು ಕೈಯಿಂದ ಬೆನ್ನಿಗೆ ಹೊಡೆದು ಹಲ್ಲೆಮಾಡಿ ಜೀವ ಬೆದರಿಕೆ ಹಾಕಿದ್ದು ಮತ್ತು ವರದಕ್ಷಿಣೆ ಸಲುವಾಗಿ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿರುವ ಕುರಿತು ಮಹಜರು ಜರುಗಿಸುವ ಸಲುವಾಗಿ ನನ್ನನ್ನು ಪಂಚರರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ದಿನಾಂಕಃ13.06.2012 ರಂದು ಬೆಳಗ್ಗೆ 8.00 ಗಂಟೆಯಿಂದ 8.45 ಗಂಟೆಯವರೆಗೆ ಗುಡ್ಡದದೇವಲಾಪೂರ ಗ್ರಾಮದಲ್ಲಿ ಗ್ರಾಮದಲ್ಲಿ ಪೋಲಿಸರು ನನ್ನ ಸಮಕ್ಷಮ ಚಾಸಾ-1 ರವರು ಹಲ್ಲೆ ಘಟನೆಯ ಜಾಗವನ್ನು ತೋರಿಸಿದಂತೆ ನಿಪಿ-1 ರಂತೆ ಮಹಜರನ್ನು ಜರುಗಿಸಿದ್ದು ಮತ್ತು ಸದರಿ ಮಹಜರಿಗೆ ಪಂಚರನಾಗಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>** ಃ 1 ನೇ ಆರೋಪಿ ಪರ ಃ ಶ್ರೀ ಪಿ.ಎನ್.ಜಿ. ವಕೀಲರಿಂದಃ ಪಾಟೀಸವಾಲು ಇರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ